## ಶಿಲ್ಪಕಲಾ ನೈಪುಣ್ಯ

ತರೀಕೆರೆ ತಾಲ್ಲೂಕು ಅಮೃತೇಶ್ವರ ದೇವಾಲಯದ ಮೇಲ್ಛಾವಣಿಯಲ್ಲಿರುವ ಹೂವಿನ ಕಲಾಕೃತಿಯ ಕೇಸರ ದಂಡದ ತುದಿಯಲ್ಲಿ ಈ ಸುಂದರ ಕಲಾಕೃತಿಯನ್ನು ಕೆತ್ತಲಾಗಿದೆ. ಈ ಮೂಲಕ ಶಿಲ್ಪಿಯು ತನ್ನ ಶಿಲ್ಪಕಲಾ ನೈಪುಣ್ಯತೆಯನ್ನು ಶಾಶ್ವತಗೊಳಿಸಿದ್ದಾನೆ. ದೇವರ ಮುಂದೆ ನಿಂತು ಕತ್ತೆತ್ತಿ ನೋಡಿದರೆ ಈ ದೃಶ್ಯದ ಸೌಂದರ್ಯವನ್ನು ಸವಿಯಬಹುದು.

**-ಕೆ.ಎನ್.ಪ್ರಭಾಕರ ಗುಪ್ತ, ಹಾಸನ**





## ಅಡವಿಯ ಬಡಗಿ

ಮನೆಯಂಗಳಕ್ಕೆ ಕುಪ್ಪಳಿಸುತ್ತಾ ಬಂದು ಹಾರಲು ಕಲಿಯುತ್ತಿದ್ದ ಹಕ್ಕಿಮರಿಯನ್ನು ಚೆನ್ನಾಗಿ ಪರೀಕ್ಷಿಸಿದಾಗ ಅದೊಂದು ‘ಮರಕುಟಿಗ’ನ ಮರಿ ಎಂದು ಅರಿವಾಯಿತು.

ಮಿಸ್ಸಿಫಾರಂ ಬಳಗದ ಮರಕುಟುಕಗಳಲ್ಲಿ ನೂರಾರು ಪ್ರಭೇದಗಳಿವೆ. ‘ಹೊಂಬಣ್ಣದ ಬೆನ್ನಿನ ಮರಕುಟಿಗ’ವನ್ನು ಹೆಚ್ಚಾಗಿ ಕಾಣಬಹುದು. ಕಾಡುಗಳ ಮತ್ತು ತೋಪುಗಳಲ್ಲಿ ನೇರವಾಗಿ ಮರಕ್ಕೆ ಅಂಟಿಕೊಂಡಂತೆ ಕುಳಿತಿರುತ್ತವೆ. ಕಾಲುಗಳು ಗಿಡ್ಡವಾಗಿ ಎರಡು ಮುಂಬೆರಳುಗಳು ನೀಳವಾಗಿದ್ದು ಉದ್ದನೆಯ ಮೊನಚಾದ ಕೆಳಬಾಗಿದ ಉಗುರುಗಳನ್ನು ಹೊಂದಿರುತ್ತವೆ. ಬಾಲದ ಗರಿಗಳು ಗಡುಸಾಗಿದ್ದು ಮರದ ಮೇಲೆ ಊರಿ ಪಕ್ಷಿಯನ್ನು ಎತ್ತಿ ಹಿಡಿಯುತ್ತವೆ. ನೀಳವಾದ ಕೊಕ್ಕು ಉಳಿಯಂತೆ ಮೊನಚಾಗಿ, ಅತಿಗಟ್ಟಿಯಾಗಿರುತ್ತದೆ. ದೊಡ್ಡ ತಲೆ, ದಪ್ಪ ಮೂಳೆಗಳು ಕೊಕ್ಕಿನ ದೃಢವಾದ ಸ್ನಾಯುಗಳು ಮರಕ್ಕೆ ಬಡಿಯುವಾಗ ನೋವಾಗದಂತೆ ಸಹಾಯಕವಾಗಿವೆ. ಮೊದಲು ಮರದ ಕೆಳಭಾಗದಲ್ಲಿ ಕುಳಿತು ಸುತ್ತುತ್ತಾ ಮರದ ಮೇಲೇರಿ ನಂತರ ಪಕ್ಕದ ಮರಕ್ಕೆ ಹಾರುತ್ತದೆ. ಚೆನ್ನಾಗಿ ಹಾರಬಲ್ಲವಾದರೂ ಬಹಳ ದೂರ ಹಾರುವುದಿಲ್ಲ. ಮೇಲೆ ಕೆಳಗೆ ತೂಗಿದಂತೆ ಹಾರುತ್ತವೆ. ಗಂಡು ಹಕ್ಕಿಯ ತಲೆಯು ಕೆಂಪು ಬಣ್ಣದಲ್ಲಿರುತ್ತದೆ. ಪೊಟರೆಗಳಲ್ಲಿ ಮೃದು ವಸ್ತುಗಳಿಂದ ಗೂಡು ಕಟ್ಟಿ 3 ರಿಂದ 4 ಬಿಳಿಯ ಮೊಟ್ಟೆಗಳಿಟ್ಟು ಕಾವು ಕೊಟ್ಟು ಮರಿ ಮಾಡಿ ಹಾರಲು ತೊಡಗುವವರೆಗೂ ಪೋಷಿಸುತ್ತವೆ.

**ಚಿತ್ರ- ಬರಹ: ಡಾ.ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**

## ಬೇಲಿ ಗಿಡ

ಕಾಕ್ಟಸ್ ಜಾತಿಗೆ ಸೇರಿದ ಇದು ಬೇಲಿಗೆ ರಕ್ಷಣೆ ನೀಡುತ್ತದೆ. ಇದನ್ನು ಬೇರು ಸಹಿತ ಇಲ್ಲ ಹಾಗೇ ನೆಡಬಹುದು. ಕಲ್ಲಿನ ಬೇಲಿ, ಗೂಟದ ಬೇಲಿ, ಕಳ್ಳಿ ಬೇಲಿ, ತಂತಿ ಬೇಲಿ ಮಧ್ಯೆ ಇದನ್ನು ನೆಡಬಹುದು. ಎತ್ತರಕ್ಕೆ ಹೋದಂತೆಲ್ಲ ಬಾಗಲಾರಂಭಿಸುತ್ತದೆ. ಅದನ್ನು ಮುರಿದು ನೆಟ್ಟರೆ ಚಿಗುರೊಡೆಯುತ್ತದೆ.

**-ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ**

